1

# ದೇವರಿಗೆ ಕೃತಜ್ಞತೆ

## (1 ಥೆಸಲೊನೀಕ 1:1-5)

ನಮ್ಮ ಧರ್ಮಕ್ಕೂ ಮತ್ತು ಜೀವಿತಕ್ಕೂ, ದೇವರೊಂದಿಗಿನ ಸಂಬಂಧವೇ ಮೂಲ ಕಾರಣವಾಗಿರುತ್ತದೆ. ದೇವರು ನಮ್ಮನ್ನು ತಿಳಿಯುವದಕ್ಕೂ ಮತ್ತು ಕೊರತೆಗಳನ್ನು ನೀಗಿಸುವದಕ್ಕೂ ದೇವರು ವಿವೇಕವನ್ನು, ಶಕ್ತಿಯನ್ನೂ ಮತ್ತು ಪ್ರೀತಿಯನ್ನೂ ಹೊಂದಿರುವನು. ನಾವು ದೇವರ ಚಿತ್ತಕ್ಕೆ ಅನುಗುಣವಾಗಿ ಪ್ರತಿಕ್ರಿಯಿಸಿದರೆ, ಆತನೊಂದಿಗೂ ಮತ್ತು ಇತರರೊಂದಿಗೂ ಉತ್ತಮವಾದ ಬಾಂದವ್ಯದಲ್ಲಿರಬಹುದು.

1 ಥೆಸಲೊನೀಕದ, ಮೊದಲನೆಯ ಭಾಗವು ಪೌಲನಲ್ಲಿ ಒಳಗೊಂಡಿದ್ದ, ಕಳೆದು ಹೋದ ಹಾಗೂ ವರ್ತಮಾನದಲ್ಲಿದ್ದ ಸಂಬಂಧದ ಕುರಿತಾಗಿ ತಿಳಿಸಲಾಗಿದೆ, ಹಾಗೂ ಸೀಲ ಮತ್ತು ತಿಮೊಥೆಯರು, ಥೆಸಲೊನೀಕ ಸಭೆಯವರೊಂದಿಗೂ ಮತ್ತು ಯೇಸುವಿನಲ್ಲಿ ದೇವರೊಂದಿಗೆ ಹೊಂದಿದ್ದ ಸಂಬಂಧದ ಕುರಿತಾಗಿಯೂ ತಿಳಿಸಲಾಗಿದೆ. 1:1-5ರ, ನಮ್ಮ ವಾಕ್ಯಭಾಗವು, ಆದೇಶಗಳು ಮತ್ತು ಸಿದ್ಧಾಂತಗಳು ರಹಿತವಾದ ಮತ್ತು ಇತರೆ ಎಲ್ಲಾ ಸಮಾಚಾರಗಳನ್ನು ಒಳಗೊಂಡಿರುವ ಮೂರು ಅಧ್ಯಾಯಗಳಿಗೆ ಪೀಠಿಕೆಯನ್ನು ಪ್ರಾರಂಭಿಸುತ್ತದೆ. ಏನಾಯಿತು ಮತ್ತು ಏನು ಸಂಭವಿಸುವದು ಎಂಬ ಲೆಕ್ಕಾಚಾರವನ್ನು ಈ ಅಧ್ಯಾಯಗಳು ತಿಳಿಸುತ್ತವೆ. ಅದರಲ್ಲಿ ಒಳಗೊಂಡಿರುವ ಜನರ ಒಳ್ಳೆ ಬಾಂದವ್ಯದ ಕುರಿತು ತಿಳಿಸುತ್ತದೆ, ಅದು ಶುಭ ಸಂದೇಶವೇ ಆಗಿರುತ್ತದೆ.

ಇತರೆ ವೈಯಕ್ತಿಕ ಪತ್ರಿಕೆಗಳಂತೆ, 1 ಥೆಸಲೊನೀಕವು, ಬರೆದವರಿಗೂ ಮತ್ತು ಅದನ್ನು ಸ್ವೀಕರಿಸಿದವರಿಗೂ ನಡುವೆ ಇರುವ ಸಂಬಂಧದ ಬುನಾದಿಯ ಕುರಿತು ಒತ್ತಿ ಹೇಳುತ್ತದೆ. ಈ ಪತ್ರಿಕೆಗೂ ಮತ್ತು ಹೊಸ ಒಡಂಬಡಿಕೆಯನ್ನು ಹೊರತು ಪಡಿಸಿರುವ ಪತ್ರಿಕೆಯ ನಡುವೆ ಇರುವ ವ್ಯತ್ಯಾಸವೇನೆಂದರೆ, ಈ ಪತ್ರಿಕೆಯು ದೇವರಿಂದ ಪ್ರೇರೆಪಿಸಲ್ಪಟ್ಟು ಯಥಾರ್ಥವಾದದ್ದಾಗಿದೆ. ಮತ್ತು ದೇವರನ್ನು ಮೆಚ್ಚಿಸುವ ಸಂಬಂಧದ ಮಾದರಿಯಾಗಿದ್ದು, ಅದರಂತೆ ಅಭಿವೃದ್ಧಿ ಹೊಂದಲು ಸಹಕರಿಸುತ್ತದೆ. ಇದು ಸತ್ಯವಾದಘಟನೆಗಳಾಗಿವೆ, ಮತ್ತು ಪ್ರೇರಿತವಾಗಿವೆ, ನಾವು ಆತನ ಸತ್ಯವನ್ನು ಅರಿತು ಅದರಿಂದ ಧನ್ಯರಾಗಬೇಕೆಂದು ತಿಳಿಸುವ ಪತ್ರಿಕೆಯಾಗಿದೆ!

ಆದುದರಿಂದ, ಇದು ಉದ್ದೇಶ ಭರಿತವಾದ ಸಮಾಚಾರವಾಗಿದೆ. ನಮ್ಮ ಕ್ರೈಸ್ತ ಜೀವಿತದಲ್ಲಿ ವ್ಯತ್ಯಾಸವನ್ನು ಉಂಟುಮಾಡುವ ಸಮಾಚಾರವಾಗಿದೆ. ಅದು ನಮ್ಮನ್ನು ಕೃತಜ್ಞರಾದ ಅನುಯಾಯಿಗಳನ್ನಾಗಿ ಮಾರ್ಪಡಿಸುತ್ತದೆ. ಅದು ನಮ್ಮನ್ನು ಪುನಶ್ಚೇತನಪಡಿಸುವ ಸಮಾಚಾರವಾಗಿದೆ! ಕೃತಜ್ಞತೆಯ ಜೀವಿತದ ಬಗ್ಗೆ, ಈ ಸಮಾಚಾರದಿಂದ ಏನನ್ನು ತಿಳಿಯೋಣ?

### ದೇವರನ್ನು ಒಪ್ಪಿಕೋ (1:1)

ನಾವು ಆತನ ಸೃಷ್ಟಿಗಳೆಂದು ಯಾವಾಗಲೂ ದೇವರು ಒಪ್ಪಿಕೊಂಡಿರುವನು. ಆದರೆ ಆತನು ನಮ್ಮನ್ನು ಸೃಷ್ಟಿಸಿದವನೆಂದು ನಾವು ಒಪ್ಪಿಕೊಳ್ಳಬಾರದೇ? ಅದು ನಮಗೆ ಸರಿಯಾದದ್ದು ಮಾತ್ರವಾಗಿರದೆ; ಅದು ನಮಗೆ ಒಳ್ಳೇಯದೇ ದೇವರ ಕುರಿತಾದ ಅರಿವು ನಮಗೆ ಪ್ರಾಮುಖ್ಯವಾಗಿದೆ - ಆತನ ಇರುವಿಕೆಯ ಅರಿವು, ಆತನ ಸ್ವಭಾವ, ನಮ್ಮ ಕುರಿತಾಗಿ ಆತನು ಹೊಂದಿರುವ ಯೋಚನೆ ಮತ್ತು ನಾವು ಆತನ ಅಭಿಲಾಷೆಗಳಿಗೆ ಪ್ರತಿಕ್ರಿಯಿಸ ಬೇಕು

ಎಂದು ಬಯಸುತ್ತಾನೆ!

ಕ್ರೈಸ್ತರು ಹೊಸ ಒಡಂಬಡಿಕೆಯ ಪತ್ರಿಕೆಗಳನ್ನು ಓದುವ ಆರಂಭದಲ್ಲಿ, ಅದರಲ್ಲಿರುವ ಎಲ್ಲಾ ವಿಷಯಗಳು ಒಂದೇ ಎಂದು ತಿಳಿಯುತ್ತೇವೆ. ಮೊದಲ ಕೆಲವು ವಚನಗಳನ್ನು ಓದುವಾಗ ಅದರಲ್ಲಿರುವ ಪದಗಳು ಪರಿಚಯವುಳ್ಳವುಗಳೇ ಎಂದು ಯೋಚಿಸುತ್ತೇವೆ, ಈ ಮೊದಲೇ ಅವುಗಳನ್ನು ಕೇಳಿರುವೆವು, ಅದನ್ನು ಸರಳವಾಗಿ ಅರ್ಥಮಾಡಿಕೊಳ್ಳಬಹುದೆಂದು ತಿಳಿಯುತ್ತೇವೆ. ಅದನ್ನು ಆಳವಾಗಿ ಓದಿ ದ್ಯಾನಿಸುವಂತ ಅಗತ್ಯತೆಯಿಲ್ಲವೆಂದು ತಿಳಿಯುತ್ತೇವೆ.

ಬೈಬಲ್ ದೇವರೇ ಬರೆದಿರುವ ಪ್ರಕಟನೆ ಎಂದು ನಾವು ನೆನಪು ಮಾಡಿಕೊಳ್ಳಬೇಕು. ಇದರಲ್ಲಿ ಮಾತ್ರ ದೇವರು ನಮಗೆ ತಿಳಿಸುವ ಸಂಗತಿಗಳುಂಟು ಎಂಬ ಅರಿವನ್ನು ಹೊಂದಿಕೊಳ್ಳಬೇಕು. ಇದರಲ್ಲಿ ಮಾತ್ರ ನಮ್ಮ ಜೀವಿತಕ್ಕೆ ಪರಿಪೂರ್ಣವಾದ ಮಾರ್ಗದರ್ಶನ ಉಂಟು. ಈ ಕಾರಣದಿಂದ 1 ಥೆಸಲೊನೀಕ ಪತ್ರಿಕೆಯು ಪರಿಚಯವಿರುವ ಆರಂಭದ ಪತ್ರಿಕೆಯೆಂದು ಪರಿಗಣಿಸದೇ, ಕ್ರೈಸ್ತರು ದೇವರಿಂದ ಕಲಿಯಬೇಕಾಗಿರುವ ಸಂಗತಿಗಳಿಗೆ ಒಂದು ಅವಕಾಶವೆಂದು ತಿಳಿಯಬೇಕು. ಇವು ಗಳು ನಾವು ಅರಿಯಬೇಕಾದ ಸಂಗತಿಗಳು ಹಾಗೂ ನಮ್ಮ ಸನ್ನಿವೇಶಕ್ಕೆ ಅನುಗುಣ ವಾಗಿರುವಂತೆ ಇರುವ ದೇವರ ಮಾತುಗಳ ಬರವಣಿಗೆಯಾಗಿದೆ. ಇದು ದೇವರು ನಮ್ಮೊಂದಿಗೆ ಮಾತನಾಡುವ - ಪರಿ ಇದನ್ನು ಥೆಸಲೊನೀಕದವರಿಗೂ ಮಾತನಾಡಿರುವ ವಿಷಯವಾಗಿದೆ!

"ತಂದೆಯಾದ ದೇವರಲ್ಲಿಯೂ ಕರ್ತನಾದ ಯೇಸು ಕ್ರಿಸ್ತನಲ್ಲಿಯೂ" (1:1) ನಮ್ಮ ಜೀವಿತವು ಆತನ ಮೇಲೆ ಅವಲಂಬಿತಾಗಿದೆ ಎಂದು ಕ್ರೈಸ್ತಬರಹಗಾರರಿಗೂ ಮತ್ತು ಓದುಗರಿಗೂ ನೆನಪಿಸುವ ವ್ಯಾಖ್ಯಾನವಾಗಿದ್ದು, "ಆತನಲ್ಲಿಯೇ ನಾವು ಜೀವಿಸುತ್ತೇವೆ, ಚಲಿಸುತ್ತೇವೆ, ಮತ್ತು ಇರುತ್ತೇವೆ" (ಅಪೊಸ್ತಲಕೃತ್ಯಗಳು 17:28). ಕ್ರೈಸ್ತರೊಂದಿಗೆ ದೇವರು ಇರುವದರಿಂದ, ನಮ್ಮ ಬದಿಯಲ್ಲಿರುವದರಿಂದ, ಮತ್ತು ನಮ್ಮೊಳಗೆ ಇರುವದರಿಂದ, ನಾವು ಜೀವಿಸುತ್ತೇವೆ, ಮಾತನಾಡುತ್ತೇವೆ, ಮತ್ತು ಕೆಲಸ ಮಾಡುತ್ತೇವೆ! ದೇವರ ಮತ್ತು ಯೇಸುವಿನ ಕುರಿತಾದ ಅರಿವಿನ ಮುಂದುವರಿಕೆಯಿಂದ ನಾವುಗಳು ದೈವಭಕ್ತರಾಗಿ ಜೀವಿಸುವದಕ್ಕೆ ಉತ್ತೇಜನವನ್ನು ಮತ್ತು ಸ್ಫೂರ್ತಿಯನ್ನು ನೀಡುತ್ತದೆ. ಪೌಲನು ಇದನ್ನು, "ನನಗಂತೂ ಬದುಕುವದೆಂದರೆ, ಕ್ರಿಸ್ತನೆ" (ಫಿಲಿಪ್ಪಿ 1:21ಎ) ಮತ್ತು "ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುವನು" (ಗಲಾತ್ಯ 2:20ಬಿ) ಎಂದು ತಿಳಿಸಿರುವನು.

ಪ್ರತಿದಿನದ ಹಾಗೂ ಗಳಿಗೆಯಲ್ಲಿ ದೇವರೊಂದಿಗೆ, ಜೀವಿಸುವ ವಿಧವನ್ನು ಯಾವ ರೀತಿಯಲ್ಲಿ ನಾವು ಅಭಿವೃದ್ಧಿಪಡಿಸಿಕೊಳ್ಳಬಹುದು? ಈ ವಿಷಯದಲ್ಲಿ, ಕ್ರಿಸ್ತನಲ್ಲಿರುವ ನಮ್ಮ ಸಹೋದರ ಸಹೋದರಿಯರನ್ನು ಯಾವ ರೀತಿಯಲ್ಲಿ ಪ್ರೋತ್ಸಾಹಿಸಬಹುದು? ಇತರೆ ದೇವತೆಗಳನ್ನು ದೂರ ಇಡುವದರ ಮೂಲಕ, ಥೆಸಲೊನೀಕದವರು ಈ ಕಾರ್ಯವನ್ನು ಮಾಡಿದ್ದರು (1:9), ದೇವರ ವಾಕ್ಯವನ್ನು ಒಪ್ಪಿಕೊಳ್ಳುವದರ ಮೂಲಕ (2:13), ಕ್ರಿಸ್ತನನ್ನು ಅನುಸರಿಸುವವರ ಮಾದರಿಯ ಮೂಲಕ (2:14), ಹಾಗೂ ನಂಬಿಕೆ, ನಿರೀಕ್ಷೆ, ಮತ್ತು ಪ್ರೀತಿಯನ್ನು ಆಧರಿಸಿಕೊಂಡು ತಮ್ಮ ಕಾರ್ಯಗಳನ್ನು ಮಾಡುತ್ತಿದ್ದರು (1:3).

ಆತನ ಜನರು ಏನನ್ನು ಹೊಂದಿರಬೇಕೆಂದು ದೇವರು ಬಯಸುತ್ತಾನೆ? ಇದಕ್ಕೆ ಸಂಬಂಧಪಟ್ಟಂತೆ ಪೌಲನು ಮೊದಲನೆಯದಾಗಿ "ಕೃಪೆ ... ಮತ್ತು ಶಾಂತಿ" ಎಂಬ ಆಲೋಚನೆಯನ್ನು ಸಹೋದರರಿಗೆ ನೀಡಿರುವನು (1:1). ದೇವರಲ್ಲಿ ಮತ್ತು ಪೌಲನಲ್ಲಿ, ಥೆಸಲೊನೀಕದರ ಕುರಿತು ಇದ್ದ ಮಹತ್ವದ ಆಲೋಚನೆಯನ್ನು ಅವರು ತಿಳಿಯುವಂತೆ ಬಯಸಿದನು. ಆ ಆದಿ ಕ್ರೈಸ್ತರು ದೇವರ ಕನಿಕರ ಹಾಗೂ ಸಂತೈಸುವಿಕೆಯನ್ನು ಹೊಂದಲಾಪೇಕ್ಷಿಸಿದನು. ಥೆಸಲೊನೀಕದವರಿಗೆ ಇತರೆ ಆಶೀರ್ವಾದಗಳ ಅಗತ್ಯತೆ ಇರುವದಾಗಿದ್ದರೂ ಸಹ, ಇವೆರಡುಗಳು ಅತಿ ಅವಶ್ಯವುಳ್ಳವುಗಳಾಗಿದ್ದವು.

ಕ್ರೈಸ್ತರು ಹೇಗೆ ಪರಸ್ಪರ ಆದರಣೆ ಮಾಡಿಕೊಳ್ಳಬಹುದೆಂಬ ತತ್ವವನ್ನು ಈ ಮೊದಲನೆಯ

ವಚನದಲ್ಲಿ ತಿಳಿಸಲಾಗಿದೆ. ಪೌಲನು ಉತ್ತೇಜನದ ಪತ್ರಿಕೆಯನ್ನು ಬರೆಯುತ್ತಿರುವನು. ಅಂಥಹ ವಿಶೇಷವಾದ ಮಾದರಿಯನ್ನು ಅನುಸರಿಸುವಲ್ಲಿ ಇರುವ ಬೆಲೆಯನ್ನು ಅರಿತವರಾಗಿ, ಥೆಸಲೊನೀಕದವರು ಅವರ ಬೋಧಕರುಗಳನ್ನು ಅನುಸರಿಸುವಲ್ಲಿ ಮುಂದಾಗಿದ್ದರು (1:6). ಇತರ ಕ್ರೈಸ್ತರನ್ನು ಉತ್ತೇಜಿಸುವದಕ್ಕೆ - ಕ್ರೈಸ್ತರಾಗಿ ನೀವು ಎಷ್ಟು ನುರಿತವರಾಗಿರಬೇಕು? ಉತ್ತೇಜನ ಪತ್ರವನ್ನು ಬರೆಯುವದನ್ನು ಕಲಿಯಲು, ಪ್ರಸಂಗಿಗಳ ಶಾಲೆಯಲ್ಲಿ ಎಷ್ಟು ಸಮಯ ತರಬೇತಿಯನ್ನು ಪಡೆಯಬೇಕು? ಇದನ್ನು ಹೊಸ ಕ್ರೈಸ್ತರು ಸಹ ಮಾಡಲು ಅಸ್ಪದವಿದೆ.

ಬೈಬಲ್ ಶಾಲೆಯ ಮಕ್ಕಳು ತಮ್ಮ ತಂದೆ ತಾಯಿಗಳಿಂದ ಮೆಚ್ಚುಗೆ ಪಡೆಯಲು ಉತ್ತೇಜನಕರವಾದ ಸಂದೇಶಗಳನ್ನು ಬರೆಯಬಹುದು. ಹಿರಿಯರು ತಮ್ಮ ಕಿರಿಯರಿಂದ ಮೆಚ್ಚುಗೆ ಪಡೆಯಲು ವಂದನೆಯ ಪದಗಳನ್ನು ಬಳಸಬಹುದು. ಕ್ರೈಸ್ತರು ಬೇರೆ ರಾಜ್ಯದಲ್ಲಿರುವ ತಮ್ಮ ಸಹೋದರ ಸಹೋದರಿಯರಿಗೆ, ದೇವರು ಅವರ ಮೇಲಿಟ್ಟಿರುವ ಕರುಣೆ ಹಾಗೂ ಚಿಂತನೆಯ ಬಗ್ಗೆ ಬರೆಯಬಹುದು.

ಪೂರ್ಣಜೀವಿತಕ್ಕೆ ಆದರಣೆ ನೀಡುವ, ಪ್ರಸಿದ್ಧವಾದ ವಾಕ್ಯಗಳು ಈ ವಚನದಲ್ಲಿ ಅಡಕವಾಗಿವೆ. ಅದನ್ನು ದೇವರೇ ಯೋಜಿಸಿರುವದರಿಂದ, ಆ ಮಾರ್ಗದರ್ಶನದಂತೆ, ನಾವು ಓದಬಹುದು, ಅರ್ಥಮಾಡಿಕೊಳ್ಳಬಹುದು, ಮತ್ತು ಅದನ್ನೇ ಮಾಡಬಹುದು!

## ದೇವರಿಗೆ ಕೃತಜ್ಞತಾ ಸ್ತುತಿ ಸಲ್ಲಿಸಿರಿ (1:2)

ಕೃತಜ್ಞರಾಗಿರುವದು ಕ್ರೈಸ್ತತ್ವದ ಒಂದು ಭಾಗವಾಗಿರುತ್ತದೆ. ಪೌಲ, ಸೀಲ ಹಾಗೂ ತಿಮೊಥೆಯರು ಕೃತಜ್ಞತೆವುಳ್ಳ ಉಪದೇಶಕರಾಗಿದ್ದರು. ಅವರ ಪ್ರಾರ್ಥನೆಯಲ್ಲಿ ದೇವರಿಗೆ ನಿರಂತರವಾದ ಕೃತಜ್ಞತೆಯನ್ನು ಸಲ್ಲಿಸಿದರು: "ನಮ್ಮ ಪ್ರಾರ್ಥನೆಗಳಲ್ಲಿ ನಿಮಗೋಸ್ಕರ ವಿಜ್ಞಾಪನೆ ಮಾಡುವಾಗ ನಿಮ್ಮೆಲ್ಲರ ವಿಷಯದಲ್ಲಿ ದೇವರಿಗೆ ಯಾವಾಗಲೂ ಕೃತಜ್ಞತಾಸ್ತುತಿ ಸಲ್ಲಿಸುತ್ತೇವೆ" (1:2). ಇದು ಉಪದೇಶಕರ ಜೀವಿತಕ್ಕೆ ಪ್ರಮುಖವಾದ ಅಂಶವಾಗಿದ್ದರೂ, ಅದು ಪ್ರಸಂಗಿಗಳಿಗೆ ಮತ್ತು ಬೋಧಕರುಗಳಿಗೆ ಅನ್ವಯಿಸುವದಿಲ್ಲವೇ? ಈ ಬೆಲೆಯುಳ್ಳ ಪಾಠಗಳು ಪ್ರತಿಯೊಬ್ಬರಿಗೂ ಅನ್ವಯಿಸುತ್ತದೆ! "ಯಾವಾಗಲೂ, ಎಲ್ಲಾ ಕಾರ್ಯಗಳಿಗೋಸ್ಕರ ಸ್ತುತಿ ಮಾಡಿರಿ" (ಎಫೆಸ 5:20). "ವಂದನೆ" ಎಂಬ ವಾಖ್ಯವನ್ನು ಸಾಮಾನ್ಯವಾಗಿ ಮಕ್ಕಳಿಗೆ ಬೋಧಿ ಸುತ್ತೇವೆ. ಅದು ಕೇವಲ ಗಂಭೀರವಾದ ತೋರ್ಪಡಿಸುವಿಕೆ ಎಂಬುದಾಗಿ ಇರದೆ (ಅದು ಗಂಭೀರವಾದದ್ದೆ!), ಆದರೆ ಅದು ದೈವೀಕ ಭಕ್ತಿಯ ತೋರ್ಪಡಿಸುವಿಕೆ ಆಗಿರುತ್ತದೆ.

ಈ ಸ್ತುತಿಸುವದು, ಎನ್ನುವಂಥದ್ದು ಹೊಸ ಒಡಂಬಡಿಕೆಯ ಸಾಮಾನ್ಯವಾದ ಅಂಶವಾಗಿರುತ್ತದೆ, ಅದು ನಮ್ಮ ಪ್ರಾರ್ಥನೆಯ ಅಂಶವೂ, ಅಗಿರುತ್ತದೆಯೇ? ನಮ್ಮ ಜೀವಿತದಲ್ಲಿ ಕುಟುಂಬದಲ್ಲಿ, ಮತ್ತು ಸಭೆಯಲ್ಲಿ ಸ್ತುತಿ ಮಾಡಲು ಕಾರಣವನ್ನು ಹುಡುಕುತ್ತೇವೆಯೇ? ಒಳ್ಳೆಯದನ್ನು ಅರಿತು, ನಂತರ ವಂದನೆ ಹೇಳುವದು ಒಂದು ಹವ್ಯಾಸವೇ? ಎಲ್ಲವೂ ಸುಲಲಿತವಾಗಿ ಸಾಗುವಾಗ ದೇವರಿಗೆ ವಂದನೆ ಹೇಳುವದು, ಮತ್ತು ಕಷ್ಟದ ಸಮಯದಲ್ಲಿ ಆತನಲ್ಲಿ ಸಹಾಯ ಕೇಳುವದು ಮಾತ್ರವೇ? ಹಾಗಾಗಿರದೆ ಯಾವಾಗಲೂ ಸ್ತುತಿ ಸಲ್ಲಿಸುವ ಜನರಾಗಿರೋಣ!

ವಚನ 2ರಲ್ಲಿ ನಡೆಯುತ್ತಿರುವದಾದರು ಏನು? ಪೌಲ, ಸೀಲ ಮತ್ತು ತಿಮೊಥೆಯರು ಕೇವಲ ಸ್ತುತಿಯ ಪ್ರಾರ್ಥನೆಯನ್ನು ಮಾತ್ರ ಸಲ್ಲಿಸುತ್ತಿರುವರೇ? ಇಲ್ಲ, ಯಾರಿಗಾಗಿ ಸ್ತುತಿಯನ್ನು ಹೇಳಬೇಕೋ, ಅವರಿಗಾಗಿ ವಂದನೆಯನ್ನು ಹೇಳುತ್ತಿರುವರು. ಕೃತಜ್ಞತಾಸ್ತುತಿಯ ಪ್ರಾರ್ಥನೆಯು ದೇವರ ಯೋಜನೆಯಾಗಿರುತ್ತದೆ, ಅದನ್ನು ಕೇವಲ ದೇವರಿಗೆ ಹೇಳುವುದು ಮಾತ್ರವಲ್ಲದೆ, ಪರಸ್ಪರ ಸಂಬಂಧಕ್ಕೂ ಸಹಾಯಕವಾಗುತ್ತದೆ. ನಾವು ಸಹೋದರರಿಗಾಗಿ ಪ್ರಾರ್ಥಿಸಿದ ನಂತರ, ಅದರ ಬಗ್ಗೆ ಅವರಿಗೆ ತಿಳಿಸಲೂ ಬೇಕು. ತೊಂದರೆಗೊಳಗಾದ, ಬೇಸರಗೊಂಡ, ಹಾಗೂ ಬಲಹೀನವಾದ ಆತ್ಮದ ಸಹೋದರರಿಗಾಗಿ ನೀಡುವಂಥ ಸಹಾಯದ

ಕುರಿತಾಗಿ, "ಪ್ರತಿದಿನವು ನಿನಗಾಗಿ ಪ್ರಾರ್ಥಿಸುತ್ತಿರುವೆನು"! ಆದುದರಿಂದ ಅವರಲ್ಲಿ ಯಾರೂ ಸಹ, "ನನ್ನ ಆತ್ಮದ ಬಗ್ಗೆ ಯಾರೂ ಚಿಂತನೆಯನ್ನು ನಡೆಸುತ್ತಿಲ್ಲ," ಎಂದು ಹೇಳುವದು ಅಸಾಧ್ಯವಾಗುತ್ತದೆ.

ಸಭೆಯಲ್ಲಿ ಇರುವ ಎಲ್ಲರಿಗೂ ಒಂದು ಜವಾಬ್ದಾರಿ ಉಂಟು. ಈ ಕೆಲಸವನ್ನು ಆರಂಭಿಸಲು, ಎಲ್ಲರೂ ಉಪದೇಶಕರೂ ನಾಯಕರೂ ಅಥವಾ ದೊಡ್ಡವರೂ ಆಗಿರುವ ಅಗತ್ಯತೆಯಿಲ್ಲ. ಅದನ್ನು ನಾವು ಈ ದಿನವೇ ಆರಂಭಿಸಬಹುದು!

## ದೈವ ಭಕ್ತಿಯ ಜೀವಿತವನ್ನು ಮೆಚ್ಚಿಕೊಳ್ಳಿರಿ (1:3)

ಕೃತಜ್ಞತೆಯಲ್ಲಿ ಯಥಾರ್ಥತೆ ಇರಬೇಕು. ಆ ದೇಶದ ಮೇರೆಗೆ ಕೃತಜ್ಞರಾಗಿರುತ್ತಿರುವೆವೋ, ಅಥವಾ ಉತ್ತಮ ಕಾರ್ಯಗಳನ್ನು ನೆನಪು ಮಾಡಿ ವಂದನೆಯನ್ನು ಹೇಳುತ್ತಿರುವೆವೋ? "ನಂಬಿಕೆಯ ಫಲವಾದ ನಿಮ್ಮ ಕೆಲಸವನ್ನು ಪ್ರೀತಿ ಪೂರ್ವಕವಾದ ನಿಮ್ಮ ಪ್ರಯಾಸವನ್ನು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೇಲಣ ನಿರೀಕ್ಷೆಯಿಂದುಟಾದ ನಿಮ್ಮ ಸ್ಥೈರಣೆ" ಎಂದು ಬರೆಯಲು ಪೌಲನಿಗೆ ಸ್ಫೂರ್ತಿ ಹೇಗೆ ಉಂಟಾಯಿತು (1:3). ಆ ಕ್ರೈಸ್ತರ ಉತ್ತಮವಾದ ಕಾರ್ಯಗಳನ್ನು ಮತ್ತು ಮನೋಭಾವವನ್ನು ಮೊದಲು ಪೌಲನು ತಿಳಿದು, ದೇವರ ಬಳಿ ಅದರ ಕುರಿತಾಗಿ ಮಾತನಾಡಿದನು. ಕ್ರೈಸ್ತರ "ಯೋಚನೆಯ" ಜೀವಿತವನ್ನು ಅಭಿವೃದ್ಧಿ ಪಡಿಸಬೇಕಾದರೆ, ನಾವು ನಮ್ಮ ಆಲೋಚನೆಗೆ ಆಧ್ಯತೆಯನ್ನು ನೀಡಬೇಕಾಗುತ್ತದೆ.

ದೈವಭಕ್ತಿಯಿಲ್ಲದ, ತಪ್ಪಾದ, ಅಥವಾ ಅನೈತಿಕವಾದ ಕಾರ್ಯಗಳನ್ನು ನಮ್ಮ ವರ್ತನೆಗಳಲ್ಲಿ ಹೊರತುಪಡಿಸಿ, ಒಳ್ಳೆಯದನ್ನೇ ಮಾಡಲು ನಾವು ಯತ್ನಿಸುವಾಗ, ನಮ್ಮ ಮನಸ್ಸನ್ನು ತರಬೇತಿ ಪಡಿಸಿಕೊಳ್ಳಲು ಯೋಚಿಸುವದಿಲ್ಲ. ಇತರರ ಸಹಾಯದಿಂದ - "ಮನಸ್ಸನ್ನು ನಿಗ್ರಯಿಸುವದು" ಅಸಾಧ್ಯ. ಆದರೆ ದೇವರ ಮಾರ್ಗದರ್ಶನದಿಂದ ನಾವೇ ರೂಪಿಸಿಕೊಳ್ಳಬಹುದು - ಅದು ದೈವವಾಕ್ಯದ ಯೋಚನೆಯಾಗಿರುತ್ತದೆ. "ಧ್ಯಾನಿಸು" ಅಥವಾ "ನಿನ್ನ ಮನಸ್ಸು ಒಂದು ವಿಷಯದಲ್ಲಿ ತಲ್ಲೀನವಾಗಿರಲಿ" ಎಂದು ವೇದವಾಕ್ಯವು ತಿಳಿಸುವಾಗ, ಅದು ನಮ್ಮ ಮನಸ್ಸನ್ನು ಮತ್ತು ಮನೋಭಾವವನ್ನು ತರಬೇತಿಗೆ ಒಳಪಡಿಸಲು ಸಹಾಯಿಸುತ್ತದೆ.

ಯಾವ ವಿಧವಾದ ಆಲೋಚನೆಯನ್ನು ನಾವುಗಳು ಹೊಂದಿರಬೇಕೆಂದು ದೇವರು ಬಯಸುತ್ತಾನೆ? "ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದಪಡುವವನಾಗಿ ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನೋ ಅವನು ಎಷ್ಟೋ ಧನ್ಯನು" ಎಂದು (ಕೀರ್ತನೆ 1:2) ಕೀರ್ತನೆಗಾರನು ತಿಳಿಸಿರುವನು. ಪೌಲನು ಸಹ, "... ಯಾವಾವದು ಸತ್ಯವೂ ಮಾನ್ಯವೂ ನ್ಯಾಯವೂ, ಶುದ್ಧವೂ ಪ್ರೀತಿಕರವೂ, ಮನೋಹರವೂ ಆಗಿದೆಯೋ ಯಾವದು ಸದ್ಗುಣವಾಗಿದೆಯೋ ಯಾವುದು ಕೀರ್ತಿಗೆ ಯೋಗ್ಯವೋ ಅವೆಲ್ಲವುಗಳನ್ನೂ ಲಕ್ಷ್ಯಕ್ಕೆ ತಂದು ಕೊಳ್ಳಿರಿ" ಎಂದಿರುವನು (ಫಿಲಿಪ್ಪಿ 4:8). ನಮ್ಮ ಜೊತೆ ಕ್ರೈಸ್ತರಲ್ಲಿರುವ ಉತ್ತಮವಾದ ಕಾರ್ಯಗಳ ಕುರಿತಾಗಿ ನಾವು ಯೋಚಿಸಬೇಕು, ಅದರ ಬಗ್ಗೆ ಯೋಚಿಸಿ ಮತ್ತು ಪ್ರಾರ್ಥಿಸಿ, ಆ ಆಲೋಚನೆಗಳನ್ನು ಇತರರೊಂದಿಗೆ ಹಂಚಿಕೊಳ್ಳಿರಿ. ನಾವು ಇತರರ ಜೀವಿತವನ್ನು ಸ್ಪರ್ಷಿಸುವಾಗ, ನಮಗೆ ಆಶೀರ್ವಾದವಾಗುತ್ತದೆ ಎಂದು ದೇವರು ಹೇಳಿರುವನು.

## ದೇವರೊಂದಿಗಿರುವ ನಿಮ್ಮ ಸಂಬಂಧವನ್ನು ಧ್ಯಾನಿಸಿರಿ (1:4)

ನಮ್ಮ ಬಗ್ಗೆ ದೇವರು ಏನು ಯೋಚಿಸುವನು? ಇದನ್ನು ಹೇಗೆ ಕಂಡುಹಿಡಿಯೋಣ? ಥೆಸಲೊನೀಕದವರ ಕುರಿತು ಆತನ ಆಲೋಚನೆಯನ್ನು ಓದಿರಿ. ವಚನ 4ರಲ್ಲಿ ಅವರ ಕುರಿತಾದ ದೇವರ ಎರಡು ಆಲೋಚನೆಗಳನ್ನು ನೋಡುತ್ತೇವೆ: ದೇವರು ಅವರನ್ನು ಪ್ರೀತಿಸಿದನು, ಮತ್ತು ದೇವರು ಅವರನ್ನು ಆರಿಸಿಕೊಂಡನು. ದೇವರು ಕ್ರೈಸ್ತರನ್ನು ಪ್ರೀತಿಸಿ,

ಆದುಕೊಂಡಿರುವದನ್ನು ನಾವು ಅರಿಯುತ್ತೇವೆ. "ಆ ಮನುಷ್ಯನನ್ನು ಪ್ರೀತಿಸುವದು," ಅಸಾಧ್ಯ ಅಥವಾ ಬಹುಶಃ, "ಅವನನ್ನು ಕ್ರೈಸ್ತನನ್ನಾಗಿ ನಾನು ಆರಿಸಿಕೊಳ್ಳಬಾರದಿತ್ತು" ಎಂದು ಕೆಲವು ಸಾರಿ ಯೋಚಿಸುತ್ತೇವೆ. ಕೊರಿಂಥ ಸಭೆಯಲ್ಲಿ ವ್ಯತ್ಯಾಸಗಳು ಉಂಟಾಗಿ, ನಂತರ ಆ ಸಹೋದರರು ಒಟ್ಟಾಗಿ, ಒಂದೇ ದೇಹವಾಗಿ ಕಾರ್ಯನಿರ್ವಯಿಸಬೇಕು ಎಂದು ಉತ್ತೇಜನಗೊಂಡಾಗ, "... ಅವರಿಗೆ ದೇವರು ಆ ಅಂಗಗಳಲ್ಲಿ ಪ್ರತಿಯೊಂದನ್ನು ತನಗೆ ಸರಿಯಾಗಿ ತೋಚಿದ ಪ್ರಕಾರ ದೇಹದೊಳಗೆ ಇಟ್ಟಿದ್ದಾನೆ" ಎಂದು ಹೇಳಲಾಯಿತು (1 ಕೊರಿಂಥ 12:18). ದೇವರು ಯಾರ್ಯಾರನ್ನು ತನ್ನ ಕುಟುಂಬದಲ್ಲಿ ಸೇರಿಸಿ ಕೊಂಡಿರುವನೋ, ಅವರಲ್ಲಿ ಆತನು ಮೆಚ್ಚಿಗೆ ವ್ಯಕ್ತಪಡಿಸಿರುವನು!

ದೇವರ ಸೇವೆಯಲ್ಲಿ ನಾವು ಯಥಾರ್ಥವಾಗಿದ್ದರೆ, ಜನರ ಕುರಿತಾದ ಆತನ ಯೋಜನೆಗಳನ್ನು ಅರ್ಥಮಾಡಿಕೊಂಡು, ಅದನ್ನೆ ನೆರವೇರಿಸುತ್ತೇವೆ. "ಅಥವಾ ನಾನು ಅವನನ್ನು ಆರಿಸಿಕೊಳ್ಳಬಾರದಿತ್ತು ಆದರೆ, ದೇವರು ಅವನನ್ನು ಆರಿಸಿದ್ದಾನೆ; ಆತನು ಉತ್ತಮವಾದದ್ದನ್ನೇ ಅರಿತಿರುವನು ಎಂದು ನಾವು ಹೇಳಬೇಕು. ದೇವರೇ ಅವನನ್ನು ಆಯ್ಕೆಮಾಡಿರುವದನ್ನು ನಾನು ಅರಿತು, ನಾನು ಅವನನ್ನು ಹಾಗೆಯೇ ಉಪಚರಿಸ ಬೇಕು." ಸಹೋದರನಂತೆ ಉಪಚಾರ ಹೊಂದಲು ಒಬ್ಬನು ಅನರ್ಹನು ಎಂದು ನಾವು ಭಾವಿಸದೆ, "ನಾವು ಮಾಡಿದ ಪುಣ್ಯಕ್ರಿಯೆಗಳ ನಿಮಿತ್ತ ದೇವರು ನಮ್ಮನ್ನು ಆರಿಸಿಕೊಳ್ಳದೆ, ಆತನ ಕರುಣೆಯಿಂದಲೇ ಆರಿಸಿಕೊಂಡಿದ್ದಾನೆ" (ತೀತ 3:5ಎ) ಎಂದು ಅರಿಯ ಬೇಕು. ನಾವು ಹೀನಾವಸ್ಥೆಯಲ್ಲಿರುವಾಗಲೇ, ದೇವರು ನಮ್ಮನ್ನು ಆದುಕೊಂಡನು ಎಂಬ ಅರಿವು ಇತರರನ್ನು ದೇವರು ಉಪಚರಿಸುವಂತೆ, ನಾವು ಸಹ ಮಾಡಲು ಸಹಾಯಿಸುತ್ತದೆ - ಅದನ್ನು ಕರುಣೆಯಿಂದಲೇ ಮಾಡಬೇಕು.

## ದೇವರ ಸಂದೇಶಕ್ಕೆ ಪ್ರತಿಕ್ರಿಯೆ ನೀಡಿರಿ (1:5)

ದೇವರು ತನ್ನ ಸಂದೇಶದ ಮೂಲಕ ನಮ್ಮೊಂದಿಗೆ ಮಾತಾಡುತ್ತಾನೆ. ಆ ಸಂದೇಶದ ಮೂಲಕವಾಗಿ ತನ್ನನ್ನು ನಮಗೆ ಪ್ರಕಟಿಸಿಕೊಂಡಿರುವನು. ಸಂದೇಶದ ಮೂಲಕ ತನ್ನ ರಕ್ಷಣೆಯನ್ನು ನಮಗೆ ನೀಡುತ್ತಾನೆ, ಸಂದೇಶದ ಮೂಲಕ ನಮ್ಮನ್ನು ತನ್ನ ಜನರಂತೆ ನಡಿಸುತ್ತಾನೆ, ಆತನ ಈ ಮಹತ್ವದ ಸಂದೇಶಕ್ಕೆ ನಮ್ಮ ಪ್ರತಿಕ್ರಿಯೆಯು ಗೌರವವನ್ನು ನೀಡುತ್ತದೋ ಅಥವಾ ಅಗೌರವವನ್ನು ಸೂಚಿಸುತ್ತದೋ.

ವಚನ 5ರಲ್ಲಿ ದೇವರ ಸಂದೇಶದ ಕುರಿತು ಎರಡು ಆಲೋಚನೆಗಳಿವೆ. ವಾಕ್ಯದ ಮೂಲಕ ಸುವಾರ್ತೆಯು ಬಂದಿತು ಎಂಬುದು ಮೊದಲನೆಯದು ಹಾಗೂ ಎರಡನೆಯದಾಗಿ "ಆತನ ಸುವಾರ್ತೆಯು ಶಕ್ತಿಯಿಂದಲೂ, ಪರಿಶುದ್ಧನಿಂದಲೂ ಪೂರ್ಣಮನವರಿಕೆಯಿಂದಲೂ, ಸಂದೇಶದ ಮೂಲಕ ಬಂದಿತು." ದೇವರ ಸುವಾರ್ತೆಯ ಪ್ರಸಾರಣೆಗೆ, ಈ ಪ್ರತಿಯೊಂದು ಆಲೋಚನೆಯಲ್ಲಿ ದೇವರ ಉದ್ದೇಶ ವನ್ನು ಕಾಣುತ್ತೇವೆ.

ಸಂದೇಶವನ್ನು ಪ್ರಸಂಗಿಸುವಾಗ ಸುವಾರ್ತೆಯು ಪ್ರಸಾರಣಗೊಳ್ಳುವದು ಮೊದಲ ಅಂಶವಾಗಿದೆ. ಸುವಾರ್ತಾ ಸಂದೇಶವು ಜನರ ಜೀವಿತವನ್ನು ಸೇರಬೇಕಾದರೆ, ಸತ್ಯವಾದ ಮತ್ತು ಪರಿಪೂರ್ಣವಾದ ದೇವರ ಸಂದೇಶದ ವಾಕ್ಯವನ್ನು ಕಲಿತುಕೊಳ್ಳಬೇಕು. ಇತರರ ಮಾತಿನಂತೆ ಮತ್ತು ಅವರ ಜೀವಿತವನ್ನು ಒಂದು ವೇಳೆ ನಾವು ಅಳವಡಿಸಿಕೊಂಡರೆ, ಜನರು ಸ್ವೀಕರಿಸಿದ ಸಂದೇಶದಲ್ಲಿ ಅಪರಿಪೂರ್ಣತೆಯು ಒಳಗೊಂಡಿರುತ್ತದೆ. ಆ ಸಂದೇಶದಲ್ಲಿರುವ ಪರಿಪೂರ್ಣತೆಯನ್ನಾಗಲಿ ಹೇಳಲು ನಮಗೆ ಅಸಾಧ್ಯ. ಆದುದರಿಂದ, ಸುವಾರ್ತಾ ಪ್ರಸಂಗವು ಅತಿ ಪ್ರಾಮುಖ್ಯವಾಗಿದೆ. ಸುವಾರ್ತೆಯು, ಮನುಷ್ಯನು ದೇವರ ಕುರಿತಾಗಿ ಹೊಂದಿರುವ ಯೋಚನೆಯಲ್ಲ, ಆದರೆ ಅದು ಮನುಷ್ಯನಿಗೆ ದೇವರು ನೀಡಿರುವ ಸಂದೇಶವಾಗಿದೆ, ಪೌಲನು ದೇವರ ಆತ್ಮನೇ ಅವನಿಗೆ, "ದೇವರ ಮನಸ್ಸನ್ನರಿಯುವ ವಾಕ್ಯಗಳನ್ನು" ನೀಡಿದನು ಎಂದನು

(1 ಕೊರಿಂಥ 2:11-13). ಥೆಸಲೊನೀಕದವರು ಈ ಸಂದೇಶವನ್ನು ಕೇಳಿದಾಗ, ಅದನ್ನು ಅವರು "ಮನುಷ್ಯರ ವಾಕ್ಯವೆಂದೆಣಿಸದೆ, ದೇವರ ವಾಕ್ಯವೆಂದೇ, ಅಂಗೀಕರಿಸಿದರು ..." (1 ಥೆಸಲೊನೀಕ 2:13).

ಸುವಾರ್ತೆಯು, "ಶಕ್ತಿಯೊಡನೆ, ಪವಿತ್ರಾತ್ಮದೊಡನೆಯೂ, ಬಹು ನಿಶ್ಚಯದೊಡನೆಯೂ ಬಂದಿರುತ್ತದೆ." ಈ ವಿಷಯವು "ಶಕ್ತಿ ಎಂದರೇನು, ಅದು ಹೇಗೆ ಪ್ರಚಾರಗೊಂಡಿತು? ಎಂಬ ಪ್ರಶ್ನೆಯನ್ನು ನಮ್ಮ ಮುಂದೆ ಇಡುತ್ತದೆ. ಪರಿಶುದ್ಧಾತ್ಮನು ಮಾಡಿದ್ದಾದರು ಏನು?"; "ಅದು ನಿಶ್ಚಯದೊಡನೇ ಬಂದಿತೋ ಅದು ಉಪದೇಶಕರಿಗೆ ಅಥವಾ ಕೇಳುಗರಿಗೆ ಅನ್ವಯಿಸುತ್ತದೋ?" ವಚನ 5ರ ಅಂತ್ಯಭಾಗದಲ್ಲಿ ಈ ಪ್ರಶ್ನೆಗೆ ಗಮನಾರ್ಹವಾದ ಉತ್ತರವಿದೆ. "ನಾವು ನಿಮ್ಮಲ್ಲಿದ್ದು ನಿಮಗೋಸ್ಕರ ಎಂಥವರಾಗಿ ವರ್ತಿಸಿದೆವೆಂಬದನ್ನು ನೀವು ಬಲ್ಲಿರಿ" ಎಂಬದು ಶಕ್ತಿಯು, ಆತ್ಮನ ಹಾಗೂ ಬಹು ನಿಶ್ಚಯದ ಸಂಕೇತವಾಗಿದೆ. ಈ ಅನ್ಯ ಆರಾಧಕರು ಆ ಬೋಧಕರ ಜೀವಿತವನ್ನು ಗಮನಿಸಿದಾಗ, ಆ ಸಂಗತಿಯು ಇವರು ಸುವಾರ್ತೆಯನ್ನು ನಂಬುವದಕ್ಕೆ ಸಹಾಯ ನೀಡಿತ್ತು. ಅದರಲ್ಲಿ ದೈವೀಕವಾದ ಅದ್ಭುತಗಳು ಮಾತ್ರ ಅಡಕವಾಗಿರದೆ ಜನರ ದೇವ ಭಕ್ತಿಯ ಆತ್ಮೀಕ ಜೀವಿತವು ಅಡಕವಾಗಿತ್ತು.

ಪ್ರಸಂಗಿಗಳಾದ ಸಹೋದರ ಬಾಬ್‌ಅಬ್ನೆ ಮತ್ತು ಇತರರು 1993ರಲ್ಲಿ, ಆಲ್ ಬೇನಿ ಯವನ್ನು ಸಂಧಿಸಿ ಒಬ್ಬ ಯೌವನಸ್ತನಿಗೆ ಸುವಾರ್ತೆಯನ್ನು ಸಾರಿದರು. ಅವರು ಕೆಲವ ರೊಂದಿಗೆ ಧ್ಯಾನಿಸಿದ ನಂತರ, ಆ ಯೌವನಸ್ತನು ಅವರನ್ನು ಕುರಿತು "ಇಸ್ಲಾಂ ಮತ್ತು ಕ್ಯಾಥೋಲಿಕರಿಗಿಂತಲೂ," ನಿಮ್ಮಲ್ಲಿ ವ್ಯತ್ಯಾಸವಿದೆ ಅಂದನು. ಆ ವ್ಯತ್ಯಾಸವೇನು ಎಂದು ಬಾಬಲ್‌ರವರು ಕೇಳಲು, "ನೀವು ಒಬ್ಬರನ್ನೊಬ್ಬರು ಪ್ರೀತಿಸುತ್ತಿರುವಿರಿ" ಎಂದು ಉತ್ತರಿಸಿದನು. ಇಂಥ ಒಂದು ಬಲವಾದ ಸಾಕ್ಷಿಯನ್ನು ಕ್ರೈಸ್ತರಿಂದ ಅವನು ಹೊಂದಿದನು. ಸುವಾರ್ತೆಯ ಸಂಗಡ ಪ್ರೀತಿಯ ಬಲವನ್ನು ಸಹ ಯೇಸು ವಾಗ್ದಾನ ಮಾಡಿರುವನು, ಅದು ಸುವಾರ್ತೆಯ ಒಂದು ಭಾಗವಾಗಿರುತ್ತದೆ: "ನಿಮ್ಮೊಳಗೆ ಒಬ್ಬರ ಮೇಲೊಬ್ಬರಿಗೆ ಪ್ರೀತಿಯಿದ್ದರೆ ಎಲ್ಲರೂ ನಿಮ್ಮನ್ನು ನನ್ನ ಶಿಷ್ಯರೆಂದು ತಿಳುಕೊಳ್ಳುವರು" (ಯೋಹಾನ 13:35). ಪ್ರತಿ ಬೋಧನೆಯಲ್ಲಿ ಈ ವಿಧವಾದ ಸಾಕ್ಷಿಯು ಗೋಚರವಾಗಬೇಕು.

## ಮುಕ್ತಾಯ

ನಮ್ಮ ಸಹೋದರ ಮತ್ತು ಸಹೋದರಿಯರ ಆತ್ಮೀಕ ಒಳಿತನ್ನು ಕುರಿತ ಚಿಂತನೆಯನ್ನು ಮಾಡಿ, ಅವರಿಗಾಗಿ ಕೃತಜ್ಞತಾ ಸ್ತುತಿಯನ್ನು ಸಲ್ಲಿಸಿ, ಅವರು ಯೇಸುವನ್ನು ಅನುಸರಿಸುವದರಲ್ಲಿ ಭಾಗಿಗಳಾಗಿರುವದರಿಂದ, ದೇವರ ಪ್ರೀತಿಯು ಅವರ ಮೇಲೆ ನೆಲೆಗೊಂಡಿರುತ್ತದೆ. ಈ ವಿಷಯಗಳನ್ನು ಈಡೇರಿಸುವ ಮೂಲಕ ದೇವರು ಅವರ ಕುರಿತಾಗಿ ಯಾವ ಚಿಂತನೆಯನ್ನು ಮಾಡುವನು, ಮತ್ತು ದೇವರು ಎಂಥವನು ಎಂಬ ನೆನಪು ಉಂಟಾಗುತ್ತದೆ. ದೇವರನ್ನು ನಾವುಗಳು ಮೆಚ್ಚಿಕೊಳ್ಳುವಾಗ, ಇತರರ ಸಹಾಯಕ್ಕಾಗಿ ಇದನ್ನು ಬಳಸಿಕೊಳ್ಳುತ್ತೇವೆ. ಆದಿ ಕ್ರೈಸ್ತರ ಈ ತತ್ವವನ್ನು ಅನುಸರಿಸೋಣ!